# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ



# ಸೊಲೊಮೋನನು ಜ್ಞಾನಿಯಾದ ಅರಸನು

ಬರಹಗಾರರು: Edward Hughes
ಚಿತ್ರಲೇಖಕರು: Lazarus
ಅಳವಡಿಸುವವರು: Ruth Klassen
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಅರಸನಾದ ದಾವೀದನು ತನ್ನ ಆಳ್ವಿಕೆಯಲ್ಲಿ ಒಳ್ಳೆಯ ದೇವರ ಮನುಷ್ಯನಾಗಿದ್ದನು. ಇಸ್ರಾಯೇಲ್ಯರು ದಾವೀದನ ಕಾಲದಲ್ಲಿ ಸೌಲನ ಕಾಲಕ್ಕಿಂತಲೂ ಹತ್ತು ಪಟ್ಟು ಬಲಿಷ್ಟರಾದರು. ಆದರೆ ಆತನಿಗೆ ವಯಸ್ಸಾಗಿ ರೋಗಿಯಾದುದ್ದರಿಂದ ಆತನ ದಿನಗಳು ಮುಗಿಯುತ್ತ ಬಂದಿರುವುದರಿಂದ ಬಹಳ ದಿನಗಳವರೆಗೆ ಆಳ್ವಿಕೆ ಮಾಡಲಾಗಲಿಲ್ಲ.





ಒಂದು ದಿನ ದಾವೀದನ ಮತ್ತೊಬ್ಬ ಮಗನಾಗಿರುವ ಆದೋನಿಯು ನಾನು ರಾಜನಾಗುತ್ತೆನೆಂದು ಇಸ್ರೇಯೇಲರಿಗೆ ತಿಳಿಸಿದನು. ಆತನ ಹೆಸರಿನ ಅರ್ಥವೆ “ನನ್ನ ಕರ್ತನು ದೇವರೆಂದು” ಆದೋನಿಯು ಒಳ್ಳೆಯ ಮನುಷ್ಯನಾಗಿರಲಿಲ್ಲ. ಆತನು ಸಿಂಹಾಸನವನ್ನು ಕದಿಯಲು ಪ್ರಯತ್ನಿಸುತ್ತಿದ್ದನು. ದಾವೀದನು ಬಲಹೀನನಾದುದ್ದರಿಂದ ಆತನನ್ನು ತಡೆಯಲು ಆಗಲಿಲ್ಲ ಆದುದ್ದರಿಂದ ದೇವರು ಬೇರೆ ವಿಧವಾದ ಯೋಜನೆಯನ್ನು ಮಾಡಿದನು.

ಸೊಲೊಮೋನನ ತಾಯಿಯು ಈತನೇ ರಾಜನಾಗಬೇಕೆಂದು ಬಯಸಿದ್ದರಿಂದ, ಅದೋನಿಯ ಎಲ್ಲಾ ಯೋಜನೆಯನ್ನು ದಾವೀದನಿಗೆ ತಿಳಿಸಿದಳು. ಆತನು ರೋಗಿಯಾಗಿದ್ದಾಗಲೂ ಎಲ್ಲಾ ನಾಯಕರನ್ನು ಕರೆದು ಸಾರ್ವಜನಿಕವಾಗಿ ಸೊಲೊಮೋನನನ್ನು ಇಸ್ರಾಯೇಲ್ಯರ ರಾಜನನ್ನಾಗಿ ಮಾಡಿದನು.



ಅದೋನಿಯಿಂದ ಸೊಲೊಮೋನನಿಗೆ ಯಾವುದೆ ತೊಂದರೆ ಆಗಲಿಲ್ಲ, ಏಕೆಂದರೆ ಇಸ್ರಾಯೇಲ್ಯರು ದಾವೀದನನ್ನು ನಂಬಿದ್ದರು. ದಾವೀದನು ಅವರಿಗೆ, ದೇವರು ಸೊಲೊಮೋನನನ್ನೆ ಅರಸನನ್ನಾಗಿ ಆರಿಸಿಕೊಂಡಿದ್ದಾನೆಂದು ಹೇಳಿದ ನಂತರ ಪ್ರಾಣ ಬಿಟ್ಟನು.





ದಾವೀದನು ಸಾಯುವ ಮೊದಲು ಸೊಲೊಮೋನನಿಗೆ ನೀನು ಎಲ್ಲಾ ವಿಷಯದಲ್ಲಿ ದೇವರಿಗೆ ವಿದೇಯನಾಗಿದ್ದು ಆತನ ಮಾತನ್ನು ಅನುಸರಿಸಿ ನಡೆದರೆ ನೀನು ಮಾಡುವಂತ ಎಲ್ಲಾ ಕಾರ್ಯದಲ್ಲಿ ಅಬಿವೃದ್ಧಿಯನ್ನು ಕಾಣುವವನಾಗಿರುತ್ತೀಯ ಎಂದನು. ಹೀಗೆ ದಾವೀದನು ಆತನಿಗೆ ಸಲಹೆಯನ್ನು ಕೊಟ್ಟನು. ಸೊಲೊಮೋನನು ದಾವೀದನ ಬದಲಿಗೆ ಸಿಂಹಾಸನದ ಉತ್ತರಾದಿಕಾರಿಯಾಗಿ ತನ್ನ ರಾಜ್ಯವನ್ನು ಸ್ಥಿರಪಡಿಸಿಕೊಂಡನು.

ಒಂದು ದಿನ ದೇವರು ಸೊಲೊಮೋನನಿಗೆ
ದರ್ಶನವುನ್ನು ಕೊಟ್ಟು ನಿನಗೇನು ಬೇಕು
ಕೇಳಿಕೋ? ಎಂದು
ಹೇಳಿದನು.
ದೇವರು ನಿನ್ನನ್ನು
ಕೇಳಿಕೋಳ್ಳಲು
ಹೇಳಿದರೆ ನೀನು
ಏನನ್ನು
ಕೇಳಿಕೋಳ್ಳಲು
ಬಯಸುತ್ತೀಯ?



ಆ ಯೌವನಸ್ಥನಾದ ಸೊಲೊಮೋನನು
ದೇವರಿಂದ ಜ್ಞಾನವನ್ನು ಕೇಳಿಕೊಂಡನು
ಆತನು ಕೇಳಿದಂತ ವಿಷಯವು
ದೇವರಿಗೆ ಮೆಚ್ಚಿಕೆಯಾಯಿತು.
ಅದುದ್ದರಿಂದ ದೇವರು
ಅವನು ಕೇಳಿದ್ದನ್ನು
ಕೊಟ್ಟಿದ್ದಲ್ಲದೆ,
ಆತನಿಗೆ ಗೌರವ
ಮತ್ತು
ಐಶ್ವರ್ಯವನ್ನು
ಕೊಟ್ಟನು.





ಸೊಲೊಮೋನನಲ್ಲಿರುವ ಜ್ಞಾನವನ್ನು ತಿಳಿದುಕೊಳ್ಳುವುದಕ್ಕೆ ಬಹಳ ದಿನಗಳು ಹಿಡಿಯಲಿಲ್ಲ, ಒಂದು ಮಗುವನ್ನು ತಗೆದುಕೊಂಡು ಎರಡು ತಾಯಂದಿರು ಆತನ ಬಳಿಗೆ ಬಂದರು, ಅವರಲ್ಲಿ ಒಬ್ಬಳ ಮಗುವು ಸತ್ತು ಹೋಗಿತ್ತು, ಬದಿಕಿರುವ ಒಂದು ಮಗುವನ್ನು ತಂದು ಇದು ನನ್ನದು ನನ್ನದು ಎಂದು ಆ ತಾಯಂದಿರು ಜಗಳ ಮಾಡಿಕೊಳ್ಳುತ್ತಿದ್ದರು. ಆದರೆ ರಾಜನು, ಬದುಕಿರುವ ಮಗುವಿನ ನಿಜವಾದ ತಾಯಿ ಯಾರದೆಂದು ಅರಸನು ಹೇಗೆ ತೀರ್ಮಾನಿಸಿದನು?

ರಾಜನು ನನಗೊಂದು ಕತ್ತಿಯನ್ನು ಕೊಡಿರಿ ಎಂದನು, ಅವರು ಒಂದು ಕತ್ತಿಯನ್ನು ಕೊಟ್ಟರು ಆದರೆ ರಾಜನು ಆ ಕತ್ತಿಯಿಂದ ಏನನ್ನು ಮಾಡಬಹುದು?



ಆಗ ರಾಜನು ಆ ಮಗುವನ್ನು ಕತ್ತರಿಸಿ ಇಬ್ಬರಿಗೂ ಅರ್ದ ಅರ್ದಬಾಗವನ್ನು ಕೊಡಿರಿ ಎಂದನು. ಕೂಡಲೆ ಇದನ್ನು ಕೇಳಿದ ಆ ಮಗುವಿನ ನಿಜವಾದ ತಾಯಿಯು ಅದನ್ನು ಕೊಲ್ಲುವುದಕ್ಕಿಂತ ಅವಳಿಗೆ ಕೊಡಿರಿ ಎಂದಳು.



ಆದರೆ ಮತ್ತೊಬ್ಬಳು ಪರವಾಗಿಲ್ಲ
ಬಾಗ ಮಾಡಿರಿ ಎಂದಳು.





ಅದನ್ನು ಕೇಳಿದ ರಾಜನು ಆ ಮಗುವನ್ನು ಅವಳಿಗೆ ಕೊಡಿರಿ ಅವಳೇ ಆ ಮಗುವಿನ ನಿಜವಾದ ತಾಯಿ ಎಂದನು. ಇದನ್ನು ಕೇಳಿದ ಜನರು ಆತನಿಗೆ ಮಹತ್ತಾದ ಗೌರವವನ್ನು ಸಲ್ಲಿಸಿ ಇದು ದೇವರಿಂದ ಬಂದ ಜ್ಞಾನವೇ ಅಂದರು.

ಇಸ್ರೆಯೇಲರಿಗೆ ದೇವರನ್ನು ಆರಾದಿಸುವುದಕ್ಕೆ ಒಂದು ದೇವಾಲಯ ಇರಲಿಲ್ಲ. ಆದರೆ ದಾವೀದನು ಅದನ್ನು ಕಟ್ಟಬೇಕೆಂದು ಬಯಸಿದ್ದನು, ಆದರೆ ದೇವರು ಆತನಿಗೆ ನೀನು ಅದನ್ನು ಮಾಡುವುದುಬೇಡ. ನಿನ್ನಿಂದ ಹುಟ್ಟುವಂತ ಮಗನು ಅದನ್ನು ಕಟ್ಟುವನು ಎಂದನು.



ಆತನ ಮಗನಾದ ಸೊಲೊಮೋನನು ಯೇರುಸಲೇಮ್‌ನಲ್ಲಿ ಒಂದು ಸುಂದರವಾದ ದೇವಾಲಯವನ್ನು ಕಟ್ಟಿದನು.

ಅದನ್ನು ಕಟ್ಟುವುದಕ್ಕೆ ಸಮಾರು
ಏಳು ವರ್ಷ ಆಯಿತು, ಆ
ದೇವಾಲದ ಪ್ರತಿಷ್ಠಾಪನೆ
ಸಮಯದಲ್ಲಿ ಸೊಲೊಮೋನನ
ಮಾತನ್ನು ಕೇಳುವುದಕ್ಕೆ ಎಲ್ಲರು
ಕೂಡಿ ಬಂದರು.



ಆಗ ಸಾವಿರಾರು ಯಜ್ಞ
ನೈವಿದ್ಯಗಳು ನಡೆದವು
ಪ್ರಾರ್ಥನೆಯು ಮುಗಿದ ನಂತರ
ಎರಡು ವಾರಗಳ ತನಕ ಬೋಜನ
ಮುಂದುವರೆಯಿತು.



ಇದಾದ ನಂತರ ದೇವರು ಪ್ರತ್ಯಕ್ಷನಾಗಿ ಸೊಲೊಮೋನನಿಗೆ ಇಸ್ರೆಯೇಲರು ನನಗೆ ವಿದೇಯರಾಗುವವರೆಗೂ ನಾನು ಅವರನ್ನು ಆಶೀರ್ವಾದಿಸುತ್ತೆನೆಂದು ದೇವರು ವಾಗ್ದಾನ ಮಾಡಿದರು.





ಸೊಲೊಮೋನನು, ಇಸ್ರಾಯೆಲ್ಯರು ದೇವರಿಗೆ ಅವಿಧೇಯರಾದರು. ಆದರೆ ದುಃಖಕರವಾದ ಸಂಗತಿ ಏನೆಂದರೆ ದೇವರು ಯಾರನ್ನು ಮದುವೆಯಾಗಬಾರದು ಎಂದು ಹೇಳಿದನೋ ಅವರನ್ನೇ ಸೊಲೊಮೋನನು ಮದುವೆಯಾದನು. ಅವನು ಮದುವೆಯಾದಂತ ಅನ್ಯರಿಂದ ಬಂದಂತ ಸ್ತ್ರೀಯರು ಅವನ ಹೃದಯವನ್ನು ವಿಗ್ರಹಗಳ ಕಡೆಗೆ ತಿರುಗಿಸಿದರು. ಅವನ ತಂದೆಯಾದ ದಾವೀದನಂತೆ ಅವನ ಹೃದಯವು ಕರ್ತನಾದ ದೇವರ ವಿಷಯದಲ್ಲಿ ಯಥಾರ್ಥವಾಗಿರಲಿಲ್ಲ.



ಸೊಲೊಮೋನನು ಒಳ್ಳೆಯ ಅವಕಾಶವನ್ನು ಕಳಕೊಂಡನು, ಆಗ ಒಬ್ಬ ಪ್ರವಾದಿಯು ಹೇಳಿದ್ದೆನೆಂದರೆ ಸೊಲೊಮೋನನ ರಾಜ್ಯವು ವಿಬಾಗವಾಗಿ ಯರೊಬ್ಬಾಮನು ಹನ್ನೇರೆಡು ಕುಲಗಳಲ್ಲಿ ಹತ್ತು ಕುಲಗಳನ್ನು ಆಳುವನು ಎಂದು ಹೇಳಿದಾಕ್ಷಣ, ಯರೊಬ್ಬಾಮನು ಸೊಲೊಮೋನನಿಗೆ ಹೆದರಿ ಐಗುಪ್ತ ದೇಶಕ್ಕೆ ಓಡಿ ಹೋಗಿ ಅಲ್ಲಿಯೆ ಉಳಿದನು.





ಸೊಲೊಮೋನನು ಸತ್ತನು, ನಂತರ
ರೆಹಬ್ಬಾಮನು ಸೊಲೊಮೋನನು
ಹೇರಿದ ನೊಗಕ್ಕಿಂತ ಕೆಟ್ಟಾದ
ರೀತಿಯಲ್ಲಿ ಜನರ ಮುಂದೆ
ವರ್ತಿಸಿದನು. ಅದನ್ನು ಕೇಳಿದ
ನಾಯಕರು ಅವನ ಮಾತನ್ನು
ತಿರಸ್ಕಾರ ಮಾಡಿ ಯೆರೊಬ್ಬಾಮನ
ಕಡೆಗೆ ಒಲಿದರು. ದೇವರ
ಪ್ರವಾದಿ ಹೇಳಿದ ಹಾಗೆ
ಸೊಲೊಮೋನನ ರಾಜ್ಯವು
ವಿಬಾಗವಾಯಿತು. ದೇವರು
ಅವಿದೇಯರನ್ನು ಎಂದಿಗೂ
ಆಶೀರ್ವಾದಿಸುವುದಿಲ್ಲ.

# ಸೊಲೊಮೋನನು ಜ್ಞಾನಿಯಾದ ಅರಸನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**1 ಅರಸು 1–12**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16